**ಕರ್ನಾಟಕಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ 17 ಇಎಸ್‌ಟಿ(10) 2025

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 04-07-2025

## ಪರಿಚಲನಾದೇಶ

ವಿಷಯ: ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ 6 ನೇ ಎಐಸಿಟಿಇ ವೇತನ ಶ್ರೇಣಿಯಡಿ ಎ ಜಿ ಪಿ 5400/6000 ದಿಂದ 7000 ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 57 ಡಿಟಿಇ 2025 ದಿನಾಂಕ:02-07-2025

******

ಉಲ್ಲೇಖದ ಆದೇಶದ ಅನುಬಂಧದಲ್ಲಿ ಹೆಸರಿಸಲಾದ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 48 ಉಪನ್ಯಾಸಕರುಗಳಿಗೆ ಕರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ 6ನೇ ಎ ಐ ಸಿ ಟಿ ಇ ವೇತನಶ್ರೇಣಿ ರೂ. 15600-39100 + ಎ ಜಿ ಪಿ ರೂ.5400/6000 ರಿಂದ ವೇತನಶ್ರೇಣಿ ರೂ. 15600-39100 + ಎ ಜಿ ಪಿ ರೂ.7000 ಉಪನ್ಯಾಸಕರು ಹಿರಿಯ ಶ್ರೇಣಿ ಹುದ್ದೆಗೆ ಅರ್ಹತಾ ದಿನಾಂಕದಿಂದ ವೃತ್ತಿ ಪದೋನ್ನತಿ ನೀಡಿರುವ ಸರ್ಕಾರದ ಆದೇಶವನ್ನು ಸಂಬಂಧಪಟ್ಟ ಉಪನ್ಯಾಸಕರುಗಳಿಗೆ ಹಾಗೂ ಸಂಬಂಧಪಟ್ಟ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಪರಿಚಯಿಸಲಾಗಿದೆ..

Digitally signed by
Prasanna H
Date: 14-07-2025
16:51:25

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ,

**ಇವರಿಗೆ**:-

1. ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ - ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಸಂಬಂಧಪಟ್ಟ ಉಪನ್ಯಾಸಕರು (ಹಿರಿಯ ಶ್ರೇಣಿ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ (ಪ್ರಾಂಶುಪಾಲರ ಮುಖಾಂತರ)
3. ನೋಡಲ್ ಅಧಿಕಾರಿ, ಇ-ಆಡಳಿತ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಅಳವಡಿಸಲು)

**ಪ್ರತಿ**:-

1. ಮಹಾಲೇಖಪಾಲರು, ಎ&ಇ, ಬೆಂಗಳೂರು;
2. ಮಹಾಲೇಖಪಾಲರು, ಎ&ಇ, (AAOGE-XI) ಬೆಂಗಳೂರು;
3. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ), ಬಹುಮಹಡಿ ಕಟ್ಟಡ, ಬೆಂಗಳೂರು;
4. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
5. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
6. ಹೆಚ್ಚುವರಿ ಪ್ರತಿ ಕಡತಕ್ಕೆ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆ ಅಡಿ 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600–39100+ ಎಜಿಪಿ ರೂ.5400/6000 ರಿಂದ ರೂ.15600–39100 + ಎಜಿಪಿ ರೂ.7000 ಉಪನ್ಯಾಸಕರು (ಹಿರಿಯ ಶ್ರೇಣಿ) ಹುದ್ದೆಗೆ ವೃತ್ತಿ ಪದೋನ್ನತಿ ನೀಡುವ ಬಗ್ಗೆ.

**ಓದಲಾಗಿದೆ:-**
1. ಎಐಸಿಟಿಇ ಅಧಿಸೂಚನೆ (Pay Scales-Diploma) ಸಂಖ್ಯೆ:F.No.37-3/Legal/2010,ದಿನಾಂಕ:05.03.2010.
2. ಸರ್ಕಾರದ ಆದೇಶ ಸಂಖ್ಯೆ:ಇಡಿ 118 ಡಿಟಿಇ 2010, ದಿನಾಂಕ:31.03.2011.
3. ಎಐಸಿಟಿಇ ಅಧಿಸೂಚನೆ [CAS Regulation - 2012 (Diploma)] ಸಂಖ್ಯೆ:F.No.37-3/ Legal/AICTE/2012, ದಿನಾಂಕ:08.11.2012.
4. ಎಐಸಿಟಿಇ ಅಧಿಸೂಚನೆ [Clarifications (Diploma/Degree] ಸಂಖ್ಯೆ:F.No.27/ RIFD/ Pay Scale/01/2013-14 ದಿನಾಂಕ:04.01.2016.
5. ಎಐಸಿಟಿಇ ಅಧಿಸೂಚನೆ F.No. 27-4/AICTE/RIFD/Pay Scale/2018-19, 20.05.2020.
6. ಸರ್ಕಾರದ ಆದೇಶ ಸಂಖ್ಯೆ:ಇಡಿ 167 ಡಿಟಿಇ 2017, ದಿನಾಂಕ:10.11.2020.
7. ಆಯುಕ್ತಾಲಯದ ಏಕ ಕಡತ ಸಂಖ್ಯೆ:DTE-ADMI0EST(10)/17/2025 (E-1686508).

EST-10 
358 
13 JUL 2025

**ಪ್ರ ಸ್ತಾ ವ ನೆ:-**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಎಐಸಿಟಿಇ, ನವದೆಹಲಿ ರವರ ಅಧಿಸೂಚನೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಕಾಲೇಜಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ 6ನೇ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳು, ವಿದ್ಯಾರ್ಹತೆ, ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆ ಸೌಲಭ್ಯಗಳು ಮತ್ತು ಇತರೆ ಸೇವಾ ಸೌಲಭ್ಯಗಳನ್ನು ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರುಗಳಿಗೆ 6ನೇ ಎಐಸಿಟಿಇ ವೇತನ ಶ್ರೇಣಿಗಳನ್ನು ದಿನಾಂಕ:01.04.2011 ರಿಂದ ಅನ್ವಯಿಸುವಂತೆ ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಎಐಸಿಟಿಇ, ನವದೆಹಲಿ ರವರ ಅಧಿಸೂಚನೆಯಲ್ಲಿ, ಎಐಸಿಟಿಇ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ (ಡಿಪ್ಲೊಮಾ) ಸಂಸ್ಥೆಗಳಲ್ಲಿ ಎಐಸಿಟಿಇ ವೇತನ ಶ್ರೇಣಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ/ ಉಪನ್ಯಾಸಕರುಗಳಿಗೆ 'ಕೆರಿಯರ್ ಅಡ್ವಾನ್ಸ್ಮೆಂಟ್ ಸೌಲಭ್ಯಗಳ ಮಂಜೂರಾತಿ ಕುರಿತಂತೆ "All India Council for Technical Education (Career Advancement Scheme for the Teachers and other Academic Staff in Technical Institutions) (Diploma) Regulations, 2012"ನ್ನು ದಿನಾಂಕ:08-11-2012 ರಿಂದ ಜಾರಿಗೊಳಿಸಲು ನಿಯಮಗಳನ್ನು ರೂಪಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಎಐಸಿಟಿಇ, ನವದೆಹಲಿರವರು ಹೊರಡಿಸಿರುವ ಅಧಿಸೂಚನೆ "All India Council for Technical Education (Career Advancement scheme for the teachers and other academic staff in technical institutions) (Diploma) Regulations 2012" ರಲ್ಲಿ ಕೆಲವೊಂದು ಅಂಶಗಳ ಬಗ್ಗೆ ಸ್ಪಷ್ಟೀಕರಣ ನೀಡಲಾಗಿದೆ. ಸದರಿ ಅಧಿಸೂಚನೆಯ ಕ್ರಮ ಸಂಖ್ಯೆ: 38ರಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಸಿ.ಎ.ಎಸ್ ಯೋಜನೆಯಡಿ ವೃತ್ತಿ ಪದೋನ್ನತ್ತಿ ಸೌಲಭ್ಯವನ್ನು ಮಂಜೂರು ಮಾಡುವಲ್ಲಿ ಎ.ಪಿ.ಐ ಸ್ಕೋರ್‌ನಿಂದ ದಿನಾಂಕ:07.11.2015ರವರೆಗೆ ವಿನಾಯಿತಿ ನೀಡಲಾಗಿರುತ್ತದೆ. ಇದನ್ನು ಎಐಸಿಟಿಇ ಅಧೀನದಲ್ಲಿ ಬರುವ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸಲು ಸದರಿ ಅಧಿಸೂಚನೆಯಲ್ಲಿ ತಿಳಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಎಐಸಿಟಿಇ, ಅಧಿಸೂಚನೆಯಲ್ಲಿ ತಾಂತ್ರಿಕ ವಿದ್ಯಾಸಂಸ್ಥೆಗಳ (ಡಿಪ್ಲೊಮಾ/ಪದವಿ) ಅಧ್ಯಾಪಕರು ಹಾಗೂ ಇತರ ಅಕಾಡೆಮಿಕ್ ಸಿಬ್ಬಂದಿಗಳ ವಿದ್ಯಾರ್ಹತೆ, ವೇತನ ಶ್ರೇಣಿಗಳು, ಸೇವಾ ಷರತ್ತುಗಳು, ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಗಳು (CAS)/ಪದೋನ್ನತಿ ಮೊದಲಾದವುಗಳಿಗೆ ಸಂಬಂಧಿಸಿದಂತೆ 6ನೇ ವೇತನ ಆಯೋಗದಲ್ಲಿ ಉಂಟಾದ ಕೆಲವು ಗೊಂದಲಗಳ ಬಗ್ಗೆ ಸ್ಪಷ್ಟೀಕರಣ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (6)ರ ಆದೇಶದಲ್ಲಿ ಸರ್ಕಾರಿ/ಖಾಸಗಿ ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ ಸಿ.ಎ.ಎಸ್ ಯೋಜನೆ ಆಧಾರಿತ ವೃತ್ತಿ ಪದೋನ್ನತಿ (CAS) ಸೌಲಭ್ಯಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ಆಯುಕ್ತಾಲಯದ ಏಕ ಕಡತದ ಪ್ರಸ್ತಾವನೆಯಲ್ಲಿ, ತಾಂತ್ರಿಕ ಶಿಕ್ಷಣ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆಸಲಾದ ಸ್ಥಾನೀಕರಣ ಮತ್ತು ಸ್ಕ್ರೀನಿಂಗ್ ಸಮಿತಿಯ ಶಿಫಾರಸಿನ ಪ್ರಕಾರ, ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಸೇವೆ ಸಲ್ಲಿಸುತ್ತಿರುವ 48 ಮಂದಿ ಉಪನ್ಯಾಸಕರು 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600–39100 + ಎಜಿಪಿ ರೂ.5400/6000 ರಿಂದ ರೂ.15600–39100 + ಎಜಿಪಿ ರೂ.7000 ಕ್ಕೆ ಉಪನ್ಯಾಸಕರು (ಹಿರಿಯ ಶ್ರೇಣಿ) ಹುದ್ದೆಯ ವೃತ್ತಿ ಪದೋನ್ನತಿಗೆ ಅರ್ಹರಾಗಿದ್ದಾರೆ ಎಂದು ಶಿಫಾರಸ್ಸು ಮಾಡಲಾಗಿದೆ. 2016ರ ಎಐಸಿಟಿಇ ಸ್ಪಷ್ಟೀಕರಣದಲ್ಲಿ ಎಜಿಪಿ ರೂ.5400/- ಹಾಗೂ ಎಜಿಪಿ ರೂ.6000/- ಗಳನ್ನು ಹಂತ-1 ಎಂದು ಪರಿಗಣಿಸಲಾಗಿದೆ. ಆದ್ದರಿಂದ, ಎಜಿಪಿ ರೂ.5400/- ರಿಂದ ಎಜಿಪಿ ರೂ.7000/-ಕ್ಕೆ ಶಿಫಾರಸ್ಸು ಮಾಡಲಾಗಿರುವ ಉಪನ್ಯಾಸಕರುಗಳ ಪ್ರಕರಣಗಳಲ್ಲಿ ರೂ.6000/- ಎಜಿಪಿ ಮಂಜೂರಾದ ದಿನಾಂಕವನ್ನು ನಮೂದಿಸಿರುವುದಿಲ್ಲ. ಸಮಿತಿಯು ಈ ಶಿಫಾರಸ್ಸು ಮಾಡಿರುವ ಸಂದರ್ಭದಲ್ಲಿ ಉಪನ್ಯಾಸಕರ ವಿದ್ಯಾರ್ಹತೆ, ಸೇವಾನುಭವ, ಅಲ್ಪಾವಧಿ ತರಬೇತಿ, ಎಪಿಐ ಅಂಕಗಳು ಹಾಗೂ ಎಐಸಿಟಿಇ ನಿಗದಿಪಡಿಸಿರುವ ಇತರ ಎಲ್ಲಾ ಮಾನದಂಡಗಳನ್ನು ಪರಿಶೀಲಿಸಿದ್ದು, ಸದರಿಯವರು ಎಲ್ಲಾ ಅರ್ಹತೆಗಳನ್ನು ಪೂರೈಸಿರುವುದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ, ಸದರಿಯವರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿಯಲ್ಲಿ ವೃತ್ತಿ ಪದೋನ್ನತಿ ಮಂಜೂರು ಮಾಡುವ ಬಗ್ಗೆ ಸೂಕ್ತ ಆದೇಶ ನೀಡುವಂತೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ 118 ಡಿಟಿಇ 2010, ದಿನಾಂಕ:31.03.2011ರಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರುಗಳಿಗೆ 6ನೇ ಎಐಸಿಟಿಇ ವೇತನ ಶ್ರೇಣಿಗಳನ್ನು ದಿನಾಂಕ:01.04.2011 ರಿಂದ ಅನ್ವಯಿಸುವಂತೆ ವಿಸ್ತರಿಸಿ ಆದೇಶಿಸಲಾಗಿದೆ. ಈ ಆದೇಶದ ಅಪೆಂಡಿಕ್ಸ್- IIರಲ್ಲಿ, ಬೋಧಕರಿಗೆ 'ಕೆರಿಯರ್ ಅಡ್ವಾನ್ಸ್‌ಮೆಂಟ್

ಯೋಜನೆ (CAS)' ಆಧಾರಿತ ವೃತ್ತಿ ಪದೋನ್ನತಿ ಹಂತಗಳನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಸೇವಾವಧಿ, ವಿದ್ಯಾರ್ಹತೆ ಮತ್ತು ಇತರ ಅರ್ಹತೆಗಳನ್ನು ವಿವರಿಸಲಾಗಿದೆ. ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ಇಡಿ 167 ಡಿಟಿಇ 2017, ದಿನಾಂಕ: 10.11.2020ರಲ್ಲಿ ಸರ್ಕಾರಿ/ಖಾಸಗಿ ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ ಸಿ.ಎ.ಎಸ್ ಯೋಜನೆ ಆಧಾರಿತ ವೃತ್ತಿ ಪದೋನ್ನತಿ (CAS) ಸೌಲಭ್ಯಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಇದಲ್ಲದೆ, ಸಿ.ಎ.ಎಸ್ ಯೋಜನೆ ಕುರಿತು ಕಾಲಕಾಲಕ್ಕೆ ಎಐಸಿಟಿಇ ಸ್ಪಷ್ಟೀಕರಣಗಳನ್ನು ನೀಡಿರುತ್ತದೆ. ಈ ಎಲ್ಲಾ ಅಂಶಗಳನ್ನು ಸ್ಥಾನೀಕರಣ ಸಮಿತಿಯು ಪರಿಶೀಲಿಸಿ ವರದಿ ಸಲ್ಲಿಸಿರುತ್ತದೆ.

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ, ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 48 ಉಪನ್ಯಾಸಕರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆ ಅಡಿ 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600–39100+ ಎಜಿಪಿ ರೂ.5400/6000 ರಿಂದ ರೂ.15600–39100 + ಎಜಿಪಿ ರೂ.7000 ಕ್ಕೆ ಉಪನ್ಯಾಸಕರು (ಹಿರಿಯ ಶ್ರೇಣಿ) ಹುದ್ದೆಗೆ ವೃತ್ತಿ ಪದೋನ್ನತಿ ನೀಡಲು ತೀರ್ಮಾನಿಸಲಾಗಿದೆ. ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 57 ಡಿಟಿಇ 2025**
**ಬೆಂಗಳೂರು, ದಿನಾಂಕ: 02ನೇ ಜುಲೈ 2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈ ಆದೇಶದ ಅನುಬಂಧದಲ್ಲಿರುವ 48 ಉಪನ್ಯಾಸಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆ (CAS)ಯಡಿ 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600–39100+ ಎಜಿಪಿ ರೂ.5400/6000 ರಿಂದ ರೂ.15600–39100 + ಎಜಿಪಿ ರೂ.7000 ಉಪನ್ಯಾಸಕರು (ಹಿರಿಯ ಶ್ರೇಣಿ) ಹುದ್ದೆಗೆ ಅರ್ಹತಾ ದಿನಾಂಕದಿಂದ ವೃತ್ತಿ ಪದೋನ್ನತಿ ನೀಡಿ ಮತ್ತು ಆರ್ಥಿಕ ಸೌಲಭ್ಯಗಳನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯಾವರ್ತಿಯಾಗಿ ಅನ್ವಯಿಸುವಂತೆ ಮಂಜೂರು ಮಾಡಿ ಆದೇಶಿಸಿದೆ.

**ಷರತ್ತುಗಳು**:

1. 2010 ಮತ್ತು 2012ರ ಎಐಸಿಟಿಇ ರೆಗ್ಯುಲೇಷನ್‌ಗಳನ್ವಯ ಎ.ಜಿ.ಪಿ ಮಂಜೂರಾತಿಯು ಸರ್ಕಾರದ ಮಾರ್ಗಸೂಚಿ/ ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ.

2. ಎ.ಜಿ.ಪಿ ಮಂಜೂರಾತಿಯು ಎಐಸಿಟಿಇ/ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸಿರುವ ಆದೇಶ/ಸುತ್ತೋಲೆ/ ಪತ್ರಗಳಲ್ಲಿ ನಿಗದಿಪಡಿಸಿರುವ ಷರತ್ತು/ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

3. ಸದರಿಯವರು ಸಿಎಎಸ್ ಮುಂಬಡ್ತಿಗೆ ಎಲ್ಲಾ ರೀತಿಯಲ್ಲೂ ಅರ್ಹತೆಯನ್ನು ಹೊಂದಿರುವ ಬಗ್ಗೆ ಸ್ಥಾನೀಕರಣ ಆಯ್ಕೆ ಸಮಿತಿಯು ಮಾಡಿರುವ ಶಿಫಾರಸ್ಸಿನಂತೆ ಪರಿಗಣಿಸಲಾಗಿದೆ.

4. ವೃತ್ತಿ ಪದೋನ್ನತಿಯ ಆರ್ಥಿಕ ಸೌಲಭ್ಯವನ್ನು ಭವಿಷ್ಯವರ್ತಿಯಾಗಿ ಅಂದರೆ, ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೊಳಿಸುವುದು.

5. ಸದರಿಯವರಿಗೆ ವೇತನ ಶ್ರೇಣಿಯನ್ನು 7ನೇ ಎಐಸಿಟಿಇ ಪರಿಷ್ಕೃತ ವೇತನ ಶ್ರೇಣಿಯಡಿ ಸಂವಾದಿಯಾಗಿ ನಿಗದಿಪಡಿಸುವುದು.

6. ಸದರಿಯವರ ಪ್ರಸ್ತಾವನೆಯಲ್ಲಿ ಯಾವುದೇ ತಪ್ಪು ಮಾಹಿತಿಯನ್ನು ಒದಗಿಸಿರುವುದು ಕಂಡು ಬಂದಲ್ಲಿ ಸದರಿಯವರುಗಳ ಎ.ಜಿ.ಪಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆ ನೀಡದೇ ಹಿಂಪಡೆಯಲಾಗುವುದು ಹಾಗೂ ತಪ್ಪು ಮಾಹಿತಿ ಒದಗಿಸಿದವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

7. ಈ ಆದೇಶದನ್ವಯ ಮಂಜೂರು ಮಾಡಲಾಗುವ ಎ.ಜಿ.ಪಿ. ಸೌಲಭ್ಯವನ್ನು ಸ್ಥಳೀಯ/ ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಡಿಸಿದಾಗ ಯಾವುದೇ ಅಸಂಗತಗಳು ಕಂಡುಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

8. ಎಜಿಪಿ ಮಂಜೂರಾತಿ ವಿವರಗಳನ್ನು ಸದರಿ ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ನಮೂದಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎನ್. ಕುಮಾರ್ 02/07/2025

**(ಎನ್. ಕುಮಾರ್)**
ಸರ್ಕಾರದ ಉಪ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಎ&ಇ), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
4. ಸಂಬಂಧಪಟ್ಟ ಪ್ರಾಂಶುಪಾಲರು/ಉಪನ್ಯಾಸಕರುಗಳಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರ ಕಛೇರಿಯ ಮೂಲಕ)
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ:**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

# ಅನುಬಂಧ

## ಸರ್ಕಾರದ ಆದೇಶ ಸಂಖ್ಯೆ:ಇಡಿ 57 ಡಿಟಿಇ 2025, ಬೆಂಗಳೂರು, ದಿನಾಂಕ:02 ನೇ ಜುಲೈ 2025

| ಕ್ರ. ಸಂ | ಹೆಸರು ಮತ್ತು ಪದನಾಮ ಶ್ರೀ/ಶ್ರೀಮತಿ | ಸೇವೆಗೆ ಸೇರಿದ ದಿನಾಂಕ | ಎ.ಜಿ.ಪಿ ರೂ.5400 ಮಂಜೂರಾದ ದಿನಾಂಕ | ಎ.ಜಿ.ಪಿ ರೂ.6000 ಮಂಜೂರಾದ ದಿನಾಂಕ | ವಿದ್ಯಾರ್ಹತೆ | ರೂ.7000/. ಎಜಿಪಿಗೆ ಅರ್ಹರಾಗಲು ಎಐಸಿಟಿಇ ನಿಗದಿಪಡಿಸಿರುವ ಎಲ್ಲಾ ಅರ್ಹತಾ ಮಾನದಂಡಗಳನ್ನು ಪೂರೈಸಿರುವ ದಿನಾಂಕ | ರೂ.7000/. ಎಜಿಪಿಗೆ ಅರ್ಹತಾ ದಿನಾಂಕ |
|---|---|---|---|---|---|---|---|
| **ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ** | | | | | | | |
| 1. | ಸಂಜೀವ ದೇಶಮುಖ., ಉಪನ್ಯಾಸಕರು, ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ. | 18.01.2010 | 01.04.2011 | 18.01.2016 | ಎಂ.ಕಾಂ | 17.01.2019 | 18.01.2019 |
| 2. | ಸುನಂದಾ ಎನ್ ತಳವಾರ ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ. | 14.12.1994 Asst. Lecturer 17.03.2007 Lecturer | 01.04.2011 | 17.03.2013 | ಎಂ.ಕಾಂ | 16.03.2016 | 17.03.2016 |
| 3. | ಸುಮಾ ಎಸ್ ಬಮ್ಮನಗೌಡ್ರು., ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ. | 27.12.1997 Asst. Lecturer 17.03.2007 Lecturer | 01.04.2011 | 17.03.2013 | ಎಂ.ಕಾಂ | 16.03.2016 | 17.03.2016 |
| 4. | ಪ್ರಶಾಂತ.ಎಸ್.ಹುಬರಟ್ಟಿ ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ. | 23.01.2010 | 01.04.2011 | 23.01.2016 | ಎಂ.ಕಾಂ | 22.01.2019 | 23.01.2019 |
| 5. | ಅಶೋಕ್ ಕುಮಾರ್.ಎಸ್.ಆರ್ ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ರಾಮನಗರ. | 03.06.1999 Asst. Lecturer 17.03.2007 Lecturer | 01.04.2011 | 17.03.2013 | ಎಂ.ಕಾಂ | 16.03.2016 | 17.03.2016 |
| 6. | ಸರಳ. ಹೆಚ್, ಉಪನ್ಯಾಸಕರು ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ. | 21.01.2010 | 01.04.2011 | 21.01.2016 | ಎಂ.ಕಾಂ | 20.01.2019 | 21.01.2019 |
| 7. | ರುದ್ರೇಶಿ. ಡಿ. ಎನ್, ಉಪನ್ಯಾಸಕರು, ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ. | 18.01.2010 | 01.04.2011 | 18.01.2016 | ಎಂ.ಕಾಂ | 17.01.2019 | 18.01.2019 |
| 8. | ಅಶ್ವಿನಿ. ಎಸ್, ಕೆ, ಉಪನ್ಯಾಸಕರು, ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ. | 26.10.2007 | 01.04.2011 | 26.10.2013 | ಎಂ.ಕಾಂ | 25.10.2016 | 26.10.2016 |
| 9. | ಜೆ. ದಾಕ್ಷಾಯಿಣಿ, ಉಪನ್ಯಾಸಕರು, ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ. | 22.01.2013 | .... | 22.01.2013 | ಎಂ. ಕಾಂ ಎಂ.ಫಿಲ್ 2008 | 21.01.2018 | 22.01.2019 |
| **ಆಂಗ್ಲಭಾಷೆ ವಿಭಾಗ** | | | | | | | |
| 1. | ನಿತ್ಯಾನಂದ.ಕೆ.ಎನ್, ಉಪನ್ಯಾಸಕರು, ಡಿ ಎ ಸಿಜಿ ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು. | 25.01.2010 | ..... | 25.01.2016 | ಎಂ.ಎ (ಆಂಗ್ಲ) | 24.01.2019 | 25.01.2019 |
| **ವಿಜ್ಞಾನ ವಿಭಾಗ** | | | | | | | |
| 1. | ಶ್ವೇತಾ.ಇ.ಆರ್., ಉಪನ್ಯಾಸಕರು, ಡಿ.ಆರ್. ಆರ್. ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ. | 21.01.2010 | 01.04.2011 | 21.01.2016 | ಎಂ.ಎಸ್.ಸಿ | 20.01.2019 | 21.01.2019 |
| 2. | ಮಹೇಶ ಕುಮಾರ, ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಹೊಸದುರ್ಗ. | 18.01.2010 | 01.04.2011 | 18.01.2016 | ಎಂ.ಎಸ್.ಸಿ | 17.01.2019 | 18.01.2019 |
| 3. | ವೇಣುಗೋಪಾಲ.ಸಿ.ಎಲ್., ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಗೌರಿಬಿದನೂರ. | 25.01.2010 | 01.04.2011 | 25.01.2016 | ಎಂ.ಎಸ್.ಸಿ | 24.01.2019 | 25.01.2019 |
| **ವಿದ್ಯುತ್ ವಿಭಾಗ** | | | | | | | |
| 1. | ನಾಗರಾಜ, ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್. | 20.01.2010 | 01.04.2011 | --- | ಬಿ.ಇ | 19.01.2019 | 20.01.2019 |
| 2. | ನವೀನ್.ಕೆ.ಆರ್., ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಬೇಲೂರು. | 18.01.2010 | 01.04.2011 | ---- | ಎಂ.ಟೆಕ್ 18.03.2019 | 17.01.2019 | 18.01.2019 |



File No. DTE-ADMIOEST(10)/17/2025-JD-DEPT TECH EDUCATION (Computer No. 1686508)

Generated from eOffice by PRAMOD T N , EST10, FDA, DEPARTMENT OF TECHNICAL EDUCATION on 15/07/2025 10:17 AM

| | | | | | | | |
|---|---|---|---|---|---|---|---|
| 3. | ತೃಪ್ತಿಕಾ.ಎಂ.ಪಿ,<br>ಉಪನ್ಯಾಸಕರು,<br>ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್,<br>ಮಂಗಳೂರು. | 24.09.2012 | --- | 24.09.2012 | ಎಂ.ಟೆಕ್<br>ಜುಲೈ.2012 | 23.09.2017 | 24.09.2017 |
| | **ಕಾಮಗಾರಿ ವಿಭಾಗ** | | | | | | |
| 1. | ಭಾಗ್ಯಲಕ್ಷ್ಮಿ.ಟಿ.ಎಂ., ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ. | 24.12.2007 | 01.04.2011 | 24.12.2013 | ಎಂ.ಟೆಕ್<br>22.03.2022 | 23.12.2016 | 24.12.2016 |
| 2. | ರೂಪಶ್ರೀ ಗೋಕಾವಿ, ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಗದಗ | 17.09.2012 | 17.09.2012 | 14.04.2013 | ಎಂ.ಟೆಕ್<br>26.12.2013 | 16.09.2017 | 17.09.2017 |
| 3. | ಮಂಜು.ಎನ್.ಎಲ್, ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ. | 24.09.2012 | 24.09.2012 | 29.11.2012 | ಎಂ.ಟೆಕ್<br>28.11.2012 | 23.09.2017 | 24.09.2017 |
| 4. | ಕಲ್ಲೇಶ್ ಕೆ.ಜಿ.<br>ಉಪನ್ಯಾಸಕರು<br>ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ | 21.01.2010 | 01.04.2011 | --- | ಎಂ.ಟೆಕ್<br>31.07.2018 | 31.07.2018 | 01.08.2018 |
| 5. | ದರ್ಶನ್.ಎನ್,<br>ಉಪನ್ಯಾಸಕರು<br>ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ. | 28.09.2012 | 28.09.2012 | 05.09.2013 | ಎಂ.ಟೆಕ್<br>04.09.2013 | 04.01.2018 | 05.01.2018 |
| 6. | ರಾಜಶೇಖರ್.ಎಂ, ಉಪನ್ಯಾಸಕರು<br>ಸರ್ಕಾರಿ ಪಾಲಿಟೆಕ್ನಿಕ್, ಬೀದರ್ | 18.01.2010 | 01.04.2011 | --- | ಬಿ.ಇ<br>(ಸಿವಿಲ್) | 17.01.2019 | 18.01.2019 |
| 7. | ಜೀವಿತ.ಟಿ.ಪಿ,<br>ಉಪನ್ಯಾಸಕರು,<br>ಶ್ರೀಮತಿ ಎಲ್ ವಿ ಸರ್ಕಾರಿ<br>ಪಾಲಿಟೆಕ್ನಿಕ್, ಹಾಸನ. | 27.09.2012 | 27.09.2012 | 04.12.2015 | ಎಂ.ಟೆಕ್<br>03.12.2015 | 25.01.2018 | 26.01.2018 |
| | **ಯಾಂತ್ರಿಕ ವಿಭಾಗ** | | | | | | |
| 1. | ಮಲಗೌಡ ಪಾಟೀಲ,<br>ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ | 28.03.2011 | 01.04.2011 | --- | ಎಂ. ಟೆಕ್<br>25.09.2018 | 25.09.2018 | 26.09.2018 |
| 2. | ದಯಾನಂದ ಕೆ.ಎನ್,<br>ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಹರಿಹರ. | 21.01.2010 | 01.04.2011 | --- | ಎಂ.ಟೆಕ್<br>02.11.2019 | 20.01.2019 | 21.01.2019 |
| 3. | ಶಾನೇಗೌಡ.ಟಿ.ಜಿ,<br>ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ. | 12.09.2012 | 12.09.2012 | --- | ಎಂ.ಟೆಕ್<br>09.01.2018 | 09.01.2018 | 10.01.2018 |
| 4. | ಶಶಿಕುಮಾರ್.ಜಿ.ಎಂ,<br>ಉಪನ್ಯಾಸಕರು,<br>ಸರ್ಕಾರಿ ವಿ.ಐ.ಎಸ್.ಎಸ್.ಜೆ<br>ಪಾಲಿಟೆಕ್ನಿಕ್, ಭದ್ರಾವತಿ | 30.06.2011 | 30.06.2011 | 18.01.2012 | ಎಂ.ಟೆಕ್<br>17.01.2012 | 29.06.2016 | 30.06.2016 |
| 5. | ರಘು. ಪಿ.,<br>ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ. | 20.01.2010 | 01.04.2011 | --- | ಬಿ.ಇ | 19.01.2019 | 20.01.2019 |
| 6. | ನರಸಿಂಹಸ್ವಾಮಿ. ಪಿ.,<br>ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು. | 18.01.2010 | 01.04.2011 | --- | ಬಿ.ಇ | 17.01.2019 | 18.01.2019 |
| 7. | ಪ್ರಸನ್ನ.ಪಿ ಗೌಡನಾಯಕ್,<br>ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಕುಶಾಲನಗರ | 14.09.2012 | --- | 14.09.2012 | ಎಂ.ಟೆಕ್<br>Before joining 2010 | 13.09.2017 | 14.09.2017 |
| 8. | ನಾರಾಯಣ ಕೆ ಜನ್ನು<br>ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಹರಿಹರ | 25.03.2011 | 01.04.2011 | --- | ಎಂ. ಟೆಕ್<br>13.12.2018 | 13.12.2018 | 14.12.2018 |
| 9. | ಕಿರಣ್‌ಕುಮಾರ್ ನಲವಡೆ,<br>ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಹುಬ್ಬಳ್ಳಿ. | 06.04.2011 | 06.04.2011 | --- | ಎಂಟೆಕ್<br>25.09.2018 | 25.09.2018 | 26.09.2018 |
| 10. | ಡಾ. ನಟರಾಜ್ ಕುಂಟೋಜಿ<br>ಸರ್ಕಾರಿ ಪಾಲಿಟೆಕ್ನಿಕ್<br>ಬಸವನಬಾಗೇವಾಡಿ | 22.01.2010 | 01.04.2011 | --- | ಎಂ.ಟೆಕ್<br>17.08.2017 | 17.08.2017 | 18.08.2017 |
| | **ಗಣಕಯಂತ್ರ ವಿಭಾಗ** | | | | | | |
| 1. | ಕಿರಣ್‌ಕುಮಾರ್.ಆರ್., ಉಪನ್ಯಾಸಕರು<br>ಸರ್ಕಾರಿ ಪಾಲಿಟೆಕ್ನಿಕ್, ಮುಳಬಾಗಿಲು | 06.01.2010 | 01.04.2011 | --- | ಬಿ.ಇ<br>(ಸಿ.ಎಸ್.ಇ) | 05.01.2019 | 06.01.2019 |
| 2. | ಜ್ಯೋತಿ.ಬಿ.ಕೆ.,<br>ಉಪನ್ಯಾಸಕರು<br>ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್,<br>ಶಿವಮೊಗ್ಗ. | 15.02.2010 | 01.04.2011 | --- | ಎಂ.ಟೆಕ್<br>19.02.2019 | 14.02.2019 | 15.02.2019 |

| | | | | | | | |
|---|---|---|---|---|---|---|---|
| 3. | ಹಣಮಂತ.ಬಿ, ಉಪನ್ಯಾಸಕರು<br>ಸರ್ಕಾರಿ ಪಾಲಿಟೆಕ್ನಿಕ್, ಕುಷ್ಟಗಿ | 11.02.2008 | 01.04.2011 | --- | ಎಂ.ಟೆಕ್<br>05.11.2015 | 05.11.2015 | 06.11.2015 |
| 4. | ಗೋಪಾಲಕೃಷ್ಣ.ಬಿ, ಉಪನ್ಯಾಸಕರು<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ | 18.02.2010 | 01.04.2011 | --- | ಎಂ.ಟೆಕ್<br>08.02.2020 | 17.02.2019 | 18.02.2019 |
| 5. | ಸುಧಾರಾಣಿ. ಬಿ.ಎಸ್., ಉಪನ್ಯಾಸಕರು<br>ಸರ್ಕಾರಿ ಪಾಲಿಟೆಕ್ನಿಕ್, ಹರಿಹರ | 09.03.2011 | 01.04.2011 | --- | ಎಂ.ಟೆಕ್<br>13.12.2018 | 13.12.2018 | 14.12.2018 |
| **ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್ ವಿಭಾಗ** | | | | | | | |
| 1. | ರಮೇಶ ನಾಡಗೌಡರ, ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ | 15.02.2010 | 01.04.2011 | --- | ಎಂ. ಟೆಕ್<br>23.10.2018 | 23.10.2018 | 24.10.2018 |
| 2. | ಸೌಮ್ಯ. ಆರ್.,<br>ಉಪನ್ಯಾಸಕರು,<br>ಡಿ.ಆರ್. ಆರ್. ಸರ್ಕಾರಿ ಪಾಲಿಟೆಕ್ನಿಕ್,<br>ದಾವಣಗೆರೆ. | 08.02.2008 | 01.04.2011 | 08.02.2014 | ಎಂ.ಇ<br>03.02.2016 | 03.02.2016 | 04.02.2016 |
| 3. | ಮಂಜುಳಾ ಹಿರೇಮಠ, ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಗದಗ. | 17.09.2012 | 17.09.2012 | 01.11.2012 | ಎಂ.ಟೆಕ್<br>31.10.2012 | 31.10.2017 | 01.11.2017 |
| 4. | ಚೇತನ್.ಎಂ.ಜಿ, ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ತುರುವೇಕೆರೆ. | 07.04.2011 | 07.04.2011 | --- | ಎಂ.ಟೆಕ್<br>31.07.2018 | 31.07.2018 | 01.08.2018 |
| 5. | ಲೋಹಿತ್ ಬಣಕಾರ, ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಸೊರಬ. | 19.02.2008 | 01.04.2011 | 19.02.2014 | ಬಿ.ಇ | 19.02.2017 | 20.02.2017 |
| 6. | ಅಸ್ಮತ್.ಎ,<br>ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್,<br>ಕೆ.ಆರ್.ಪೇಟೆ. | 07.02.2008 | 01.04.2011 | 07.02.2014 | ಎಂ.ಟೆಕ್<br>01.01.2018 | 07.02.2017 | 08.02.2017 |
| 7. | ವಿಠ್ಠಲ ಚಿಕ್ಕಲಕಿ, ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ರಬಕವಿ.ಬನಹಟ್ಟಿ. | 28.03.2011 | 01.04.2011 | --- | ಎಂ.ಟೆಕ್<br>01.08.2018 | 01.08.2018 | 02.08.2018 |
| 8. | ಆದರ್ಶ.ಕೆ.ಎಸ್.,<br>ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ. | 20.09.2012 | 20.09.2012 | --- | ಎಂ.ಟೆಕ್<br>25.01.2018 | 25.01.2018 | 26.01.2018 |
| 9. | ಶಶಿರೇಖಾ.ವೈ.ಜೆ, ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಮೊಸಳೆಹೊಸಹಳ್ಳಿ. | 12.02.2008 | 01.04.2011 | 12.02.2014 | ಎಂ.ಟೆಕ್<br>03.12.2015 | 03.12.2015 | 04.12.2015 |
| 10. | ವೇಣುಗೋಪಾಲಗೌಡ. ಡಿ, ಉಪನ್ಯಾಸಕರು,<br>ಸರ್ಕಾರಿ ಪಾಲಿಟೆಕ್ನಿಕ್, ಮೊಸಳೆಹೊಸಹಳ್ಳಿ | 04.02.2008 | 01.04.2011 | 04.02.2014 | ಎಂ.ಟೆಕ್<br>03.12.2015 | 03.12.2015 | 04.12.2015 |

02/07/2025

**(ಎನ್. ಕುಮಾರ್)**
ಸರ್ಕಾರದ ಉಪ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)